> https://www.suddimoola.in
> https://epaper.suddimoola.in

• ಬೆಂಗಳೂರು • ಬೆಂಗಳೂರು ಗ್ರಾಮಾಂತರ • ಚಿಕ್ಕಬಳ್ಳಾಪುರ • ಮೈಸೂರು
• ರಾಯಚೂರು • ಕೊಪ್ಪಳ • ಯಾದಗಿರಿ • ಕಲಬುರಗಿ • ಬಳ್ಳಾರಿ • ವಿಜಯನಗರ • ಬೀದರ

facebook.com/Suddi Moola
twitter.com/@suddimoola22

ಸುದ್ದಿಮೂಲ

# ಕ್ರೀಡಾ ಸಾಮಾಗ್ರಿ ಕಿಟ್ ವಿತರಣೆ




● **ಸುದ್ದಿಮೂಲ ವಾರ್ತೆ** ಕವಿತಾಳ, ಫೆ.06:
ಬೆಂಗಳೂರಿನ ನಂದಿ ಫೌಂಡೇಷನ್ ವತಿಯಿಂದ ಸಮೀಪದ ಅಮಿನಗಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ 6 ರಿಂದ 9 ನೇ ತರಗತಿಯ ವಿದ್ಯಾರ್ಥಿನಿಯರಿಗೆ ಆರು ಸಾವಿರ ಬೆಲೆ ಬಾಳುವ ಕ್ರೀಡಾ ಸಾಮಗ್ರಿ ಕಿಟ್ ಶುಕ್ರವಾರ ವಿತರಿಸಲಾಯಿತು.


ನಂದಿ ಫೌಂಡೇಶನ್ ಸಂಯೋಜಕಿ ರೇಣುಕಾ ಮಾತನಾಡಿ ಟಿ ಶರ್ಟ್, ಒಂದು ಜೊತೆ ಸ್ಪೋರ್ಟ್ಸ್ ಶೂ, ಬುಕ್ಸ್, ಎರಡು ಪೆನ್ನು, 12 ಪ್ಯಾಕ್ ಸ್ಯಾನಿಟರಿ ಪ್ಯಾಡ್, ಒಂದು ಸ್ಪೋರ್ಟ್ಸ್ ಬ್ಯಾಗ್ ಸೇರಿದಂತೆ ಕ್ರೀಡಾ ಸಾಮಗ್ರಿಗಳ ಕಿಟ್ ಗಳನ್ನು 117 ಮಕ್ಕಳಿಗೆ ವಿತರಣೆ ಮಾಡಲಾಗಿದೆ ಮಕ್ಕಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಪ್ರೌಢ ಶಾಲೆ ಮುಖ್ಯ ಗುರು ಬಸನಗೌಡ, ಗ್ರಾಮ ಪಂಚಾಯತಿ ಸದಸ್ಯ ಶಿವನಗೌಡ, ಎಸ್ ಡಿ ಎಂ ಸಿ ಅಧ್ಯಕ್ಷ ಅಬ್ದುಲ್ ಅಮೀದ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮೌನೇಶ ದೊಡ್ಡಮನಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರು ಹನುಮನಗೌಡ, ಶಿಕ್ಷಕಿಯರಾದ ಲಕ್ಷ್ಮಿ, ವಿಜಯಲಕ್ಷ್ಮಿ, ದೀಪಾ, ಲಕ್ಷ್ಮಿ, ಮುಖಂಡರಾದ ಮಂಜೂರ್ ಪಾಷ, ಅಯ್ಯಣ್ಣ ಉಪಸ್ಥಿತರಿದ್ದರು.

# ಮಹಿಳಾ ಸಂಘಕ್ಕೆ ನಿಯಮಬಾಹಿರ ಅನುದಾನ ವರ್ಗಾವಣೆ ; ಅಕ್ಷರ ದಾಸೋಹ ಅಧಿಕಾರಿಗೆ ನೋಟಿಸ್ ಜಾರಿ

● **ಸುದ್ದಿಮೂಲ ವಾರ್ತೆ** ಲಿಂಗಸೂಗೂರು, ಫೆ.06:
ತಾಲೂಕಿನ ಚಿತ್ತಾಪೂರ ಗ್ರಾಮದ ಭುವನೇಶ್ವರ ಸಂಜೀವಿನ ಮಹಿಳಾ ಎಫ್‌ಪಿಸಿ ಲಿಮಿಟೆಡ್ ಗೆ ಅಕ್ಷರ ದಾಸೋಹ ಯೋಜನೆಯಡಿ ಬಾಳೆಹಣ್ಣು, ಮೊಟ್ಟೆ ಸರಬರಾಜಿಗೆ 1ಕೋಟಿ 14ಲಕ್ಷ 57ಸಾವಿರ 184ರೂ ನಿಯಮಬಾಹಿರವಾಗಿ ಲಿಂಗಸುಗೂರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಿದ ಲಿಂಗಸುಗೂರ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮಾರ್ಟಿನ್ ಅಮಲ್ ಬೇಜಾವಾಬ್ದಾರಿ ತೋರಿದ ಕಾರಣ ರಾಯಚೂರು ಜಿ.ಪಂ. ಮುಖ್ಯ ಕಾರ್ಯದರ್ಶಿ ಈಶ್ವರಕುಮಾರ ಕಾಂದೂ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರಕಾರಿ/ಅನುದಾನಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು ಎಪಿಎಫ್ ಸರಕಾರಿ ಅನುದಾನವನ್ನು ಶಾಲೆಯ ಮುಖ್ಯ ಗುರುಗಳ ಹಾಗೂ ಶಾಲಾ ಎಸ್‌ಡಿಎಂಸಿ ಜಂಟಿ ಖಾತೆಗೆ ಜಮೆ ಮಾಡಿ ಸಮಿತಿ ಮುಖಾಂತರ ಸರಬುರಾಜ ಪಡೆಯಲು ನಿಯಮವಿರುತ್ತದೆ. ಆದರೆ 1ರಿಂದ 8ತರಗತಿ ಸರಕಾರಿ ಶಾಲಾ ಮಕ್ಕಳಿಗೆ ಎಪಿಎಫ್ ಬಾಬ್ತಿನ ಅನುದಾನ 1ಕೋಟಿ14ಲಕ್ಷ 57ಸಾವಿರ 184ರೂ


ಕರ್ನಾಟಕ ಸರ್ಕಾರ
ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ (ಅಕ್ಷರ ದಾಸೋಹ ಯೋಜನೆ)
ಜಿಲ್ಲಾ ಪಂಚಾಯತ ಕಾರ್ಯಾಲಯ ರಾಯಚೂರು

ಸಂಖ್ಯೆ: ಜಿ.ಪಂ.ರಾ/ಅದಾ/2025-26 ದಿನಾಂಕ: 04.02.2026

ಕಾರಣ ಕೇಳುವ ನೋಟಿಸ್

ವಿಷಯ: ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರಕಾರಿ/ಅನುದಾನಿತ ಪ್ರಾಥಮಿಕ ಶಾಲೆಗಳಿಗೆ 1 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಮೊಟ್ಟೆ/ಬಾಳೆಹಣ್ಣು APF ಅನುದಾನವನ್ನು ನಿಯಮ ಬಾಹಿರವಾಗಿ ಭುವನೇಶ್ವರಿ ಸಂಜೀವಿನಿ ಮಹಿಳಾ ಎಫ್.ಪಿ.ಸಿ. ಗೆ ಜಮಾ ಮಾಡಿರುವ ಕುರಿತು- ವಿವರಣೆ ಸಲ್ಲಿಸುವ ಬಗ್ಗೆ.

ಉಲ್ಲೇಖ:-1) ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರ ರವರ ಪತ್ರ ಸಂಖ್ಯೆ: ಎಂ1/ ಪಿ.ಎಂ.ಪೋಷಣ/APF-Fund/SNF/E-1509746/2024-25 ದಿ: 12.09.2024
2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಲಿಂಗಸೂಗೂರು ರವರ ಪತ್ರ ಸಂಖ್ಯೆ:ತಾಪಂ.ಲಿಂ/ಅದಾ/ಸಮೊ/ಬಾ/ಬಿ.ಬೆ/2025-26 ದಿ: 18.01.2026.
3) ಈ ಕಛೇರಿಯ ಪತ್ರ ಸಂಖ್ಯೆ: ಜಿಪಂರಾ/NRLM/MKPC/2025-26 ದಿ: 12.2025.

ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ಸರಕಾರಿ/ಅನುದಾನಿತ ಪ್ರಾಥಮಿಕ ಶಾಲೆಗಳಿಗೆ 1 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಮೊಟ್ಟೆ/ಬಾಳೆಹಣ್ಣು APF ಅನುದಾನವನ್ನು ಉಲ್ಲೇಖ (1) ರಂತೆ ಶಾಲೆಯ ಮುಖ್ಯಗುರುಗಳು ಹಾಗೂ ಶಾಲಾ ಎಸ್.ಡಿ.ಎಮ್.ಸಿ. ಜಂಟಿ ಖಾತೆಗೆ ಜಮಾ ಮಾಡಿ ಆಯಾ ಶಾಲೆಗಳಲ್ಲಿರುವ ಖರೀದಿ ಸಮಿತಿಯ ಮುಖಾಂತರ ಸರಬರಾಜು ಪಡೆಯಲು ನಿಯಮವಿರುತ್ತದೆ.

ಆದರೆ ಉಲ್ಲೇಖ (2) ರ ಆದೇಶದಲ್ಲಿ ನೀವು APF ಬಾಬ್ತಿನ ಅನುದಾನ ರೂ.1,14,57,184/- ಗಳನ್ನು PFMS ಮೂಲಕ BHUVANESHWARI SANJEEVINI MAHILA FPC LIMITED LINGASUGUR ರವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಿರುತ್ತೀರಿ. ನೀವು ಈ ಕ್ರಮವು ನಿಯಮಬಾಹಿರವಾಗಿದ್ದು, ಸರ್ಕಾರದ ಆರ್ಥಿಕ ಸಂಹಿತೆ ನಿಯಮಗಳಿಗೆ ವ್ಯತಿರಿಕ್ತವಾಗಿರುತ್ತದೆ. ಅಲ್ಲದೇ ಉಲ್ಲೇಖ (2) ರ ನಿಮ್ಮ ಆದೇಶದಲ್ಲಿ, ನೀವು ಉಲ್ಲೇಖಿಸಿರುವ ಈ ಕಛೇರಿಯ ಪತ್ರದಲ್ಲಿ, ಎಂ.ಡಿ.ಎನ್.ಆರ್.ಎಲ್.ಎಂ. ರವರ ಹಣ ಬಳಕೆ ಮಾರ್ಗ ಸೂಚಿ ಪತ್ರ ಸಂ: ಕೆಎಸ್ ಎಲ್ ಆರ್ ಪಿ ಎಸ್/ಪಿ.ಸಿ.ಡಿ/ಎಂ.ಕೆ.ಪಿ.ಸಿ./2/2024 ( ಇ-241594) ದಿನಾಂಕ:30.08.2025 ರಂತೆ ಪೂರ್ತಿ, ಸರಬರಾಜುದಾರರು ಎಂ.ಕೆ.ಪಿ.ಸಿ. ಯ ಸದಸ್ಯರಾಗಿದ್ದಲ್ಲಿ, ನಿಯಮಾನುಸಾರ (ಕೆ.ಟಿ.ಪಿ.ಪಿ. ನಿಯಮಗಳನ್ನು ಅನುಸರಿಸಿ) ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಆದಾಗ್ಯೂ ನೀವು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ಅನುದಾನ ವಿನಿಯೋಗಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳನ್ನು ಪರಿಪಾಲಿಸದೆ, ನಿಯಮಬಾಹಿರವಾಗಿ ಹಾಗೂ ಸರ್ಕಾರದ ನಿಯಮಾವಳಿಗಳನ್ನು ಉಲ್ಲಂಘಿಸುವ ದುರದ್ದೇಶದಿಂದ ಸದರಿ ಅನುದಾನವನ್ನು ನೇರವಾಗಿ PFMS ಮೂಲಕ BHUVANESHWARI SANJEEVINI MAHILA FPC LIMITED LINGASUGUR ರವರ ಬ್ಯಾಂಕ್ ಖಾತೆಗೆ ಜಮಾ ಮಾಡಿ ಗಂಭೀರ ಸ್ವರೂಪದ ಹಣಕಾಸಿನ ಅವ್ಯವಹಾರ ಮಾಡುವ ಮೂಲಕ ದುರ್ನಡತೆವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ನಿಮ್ಮ ಈ ಕರ್ತವ್ಯ ಲೋಪ ಮತ್ತು ಬೇಜವಾಬ್ದಾರಿತನದ ಕ್ರಮವನ್ನು ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿ ನಿಮ್ಮ ವಿರುದ್ಧ ಇಲಾಖಾ ನಿಯಮಗಳನ್ವಯ ಶಿಸ್ತಿನ ಕ್ರಮ ಏಕೆ ಜರುಗಿಸಬಾರದು ಎಂಬ ಬಗ್ಗೆ, ನಿಮ್ಮ ಲಿಖಿತ ಸಮಜಾಯಿಶಿಯನ್ನು ಮೂರು ದಿನಗಳೊಳಗಾಗಿ ಸಲ್ಲಿಸಲು ಸೂಚಿಸಿದೆ.

(ಈಶ್ವರ್ ಕುಮಾರ್ ಕಾಂದೂ) ಭಾ.ಆ.ಸೇ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ರಾಯಚೂರು

ಗೆ,
ಶ್ರೀ.ಮಾರ್ಟಿನ್ ಅಮಲ ರಾಜ್ ಸಹಾಯಕ ನಿರ್ದೇಶಕರು ಅಕ್ಷರ ದಾಸೋಹ ಕಾರ್ಯಕ್ರಮ ತಾಲೂಕ ಪಂಚಾಯತ ಲಿಂಗಸೂಗೂರು.

ಹಣ ಪಿಎಫ್‌ಎಂಎಸ್ ಭುವನೇಶ್ವರಿ ಸಂಜೀವಿನ ಮಹಿಳಾ ಎಫ್‌ಪಿಸಿ ಲಿಮಿಟೆಡ್ ಲಿಂಗಸುಗೂರ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಿರುತ್ತಿರಿ ನೀವು ಈ ಕಾರ್ಯಕ್ರಮವು ನಿಯಮ ಬಾಹಿರವಾಗಿ ಸರಕಾರದ ಆರ್ಥಿಕ ಸಂಹಿತೆ ನಿಯಮಗಳಿಗೆ ವ್ಯತಿರಿಕ್ತವಾಗಿರುತ್ತದೆ. ಅಲ್ಲದೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯ ಪತ್ರದಲ್ಲಿ ಎಂ.ಡಿ.ಎನ್.ಆರ್. ಎಲ್.ಎಂ ರವರ ಹಣ ಬಳಕೆ ಮಾರ್ಗಸೂಚಿ ಪತ್ರ ಸಂಖ್ಯೆ ಕೆಎಸ್‌ಎಲ್‌ಆರ್ ಸೂಚಿಸಲಾಗಿರುತ್ತದೆ. (ಕೆಪಿಪಿ) ನಿಯಮಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಆದಾಗ್ಯೂ ಜವಾಬ್ದಾರಿಯುತ ಅಧಿಕಾರಿಯಾಗಿ ಅನುದಾನ ವಿನಿಯೋಗಕ್ಕೆ ಸಂಬಂಧಿಸದಂತೆ ನಿಯಮಗಳನ್ನು ಪಾಲಿಸದೆ ನಿಯಮಬಾಹಿರವಾಗಿ ಹಾಗೂ ಸರಕಾರದ ನಿಯಾಮವಳಿಗಳನ್ನು ದುರುದ್ದೇಶದಿಂದ ಸದರಿ ಅನುದಾನ ನೇರವಾಗಿ ಮಹಿಳಾ ಸಂಘಗಳ ಲಿಂಗಸುಗೂರ ಬ್ಯಾಂಕ್ ಖಾತೆಗೆ ಜಮೆ ಮಾಡಿ ಹಣಕಾಸಿನ ಅವ್ಯವಹಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ನಿಮ್ಮ ಕರ್ತವ್ಯ ಲೋಪ ಮತ್ತು ಬೇಜಾವಾಬ್ದಾರಿತನ ತೋರಿದ್ದಕ್ಕೆ ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಿ ನಿಮ್ಮ ವಿರುದ್ದದ ಇಲಾಖಾ ನಿಯಮಗಳನ್ವಯ ಏಕೆ ಶಿಸ್ತಿನ ಕ್ರಮ ಜರುಗಿಸಬಾರದು ಎಂದು ಲಿಖಿತ ಸಮಜಾಯಿ ಮೂರು ದಿನದ ಒಳಗಾಗಿ ನೀಡಲು ಜಿ.ಪಂ, ಮುಖ್ಯ ಕಾರ್ಯದರ್ಶಿಗಳು ನೋಟೀಸ್‌ನಲ್ಲಿ ಸೂಚಿಸಿದ್ದಾರೆ.

# ಫೆ.10ಕ್ಕೆ ದೆಹಲಿ ಚಲೋ ಅಭಿಯಾನ : ಕಪಿಲ್ ಗೋಡಬೋಲೆ

● **ಸುದ್ದಿಮೂಲ ವಾರ್ತೆ** ಬೀದರ್, ಫೆ.06:
ಈ ತಿಂಗಳ 10ರಂದು ಬೀದರ್‌ನಿಂದ ವಿಶೇಷ ರೈಲಿನ ಮೂಲಕ 1300 ಜನ ಬೌದ್ಧ ಅನುಯಾಯಿಗಳು ಹಾಗೂ ಅಂಬೇಡ್ಕರ್‌ವಾದಿಗಳು ಈ ತಿಂಗಳ 12 ಹಾಗೂ 13ರಂದು ದೆಹಲಿಯ ರಾಮಲೀಲಾ ಜಂತರ ಮಂತರ ಮೈದಾನದಲ್ಲಿ ನಡೆಯಲಿರುವ ಮಿಷನ್ ಮಹಾಭೋಧಿ ಮಹಾವಿಹಾರ ಮುಕ್ತಿ ಆಂದೋಲನದಲ್ಲಿ ಪಾಲ್ಗೊಳ್ಳಲು ದೆಹಲಿ ಚಲೋ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ಪ್ರಧಾನ ಆಯೋಜಕ ಕಪಿಲ್ ಗೋಡಬೋಲೆ ತಿಳಿಸಿದರು.

ಶುಕ್ರವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ವಿಶ್ವಶಾಂತಿ ಬೌದ್ಧರ ಪವಿತ್ರ ಸ್ಥಳವಾದ ಬಿಹಾರದ ಬೋಧಗಯಾ ಮಹಾಬೋಧಿ ಮಹಾವಿಹಾರಕ್ಕಾಗಿ ಬಿ.ಟಿ ಕಾಯ್ದೆ 1949 ರದ್ದುಗೊಳಿಸಿ ಬೌದ್ಧ ಮಹಾವಿಹಾರದ ಆಡಳಿತ ಸಂಪೂರ್ಣ ಬೌದ್ಧರಿಗೆ ನೀಡಲು ಒತ್ತಾಯಿಸಿ ಈ ತಿಂಗಳ 12 ಹಾಗೂ 13ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯಲಿರುವ ಮಿಷನ್ ಮಹಾಭೂತಿ ಮಹಾವಿಹಾರ ಮುಕ್ತಿ ಆಂದೋಲನದಲ್ಲಿ ಪಾಲ್ಗೊಳ್ಳಲು ವಿಶೇಷ ರೈಲಿನ ವ್ಯವಸ್ಥೆ ಬೀದರ್‌ನಿಂದ ಮಾಡಲಾಗಿದ್ದು, ಬೀದರ್‌ನಿಂದ ಸುಮಾರು 600 ಬೌದ್ಧ ಅನುಯಾಯಿಗಳು ಸೇರಿದಂತೆ ನಾಡಿನ ಸುಮಾರು 1300 ಆಂದೋಲನಕಾರರು ಈ ಬೃಹತ್ ಆಂದೋಲನದಲ್ಲಿ ಪಾಲ್ಗೊಳ್ಳುವರು. ಅದಕ್ಕೂ ಮುನ್ನ ಈ ತಿಂಗಳ 10ರಂದು ಬೆಳಿಗ್ಗೆ 9:00 ಗಂಟೆಗೆ ನಗರದ ಹೃದಯ ಭಾಗದಲ್ಲಿರುವ ಅಂಬೇಡ್ಕರ್ ವೃತ್ತಕ್ಕೆ ತೆರಳಿ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಮಾಲಾರ್ಪಣೆ ಮಾಡುವ ಮೂಲಕ ದೆಹಲಿ ಚಲೋ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ನಂತರ ಸರಿಯಾಗಿ 11 ಗಂಟೆಗೆ ವಿಶೇಷ ರೈಲಿಗೆ ಪೂಜೆ ಸಲ್ಲಿಸಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಮತ್ತೆ ದೆಹಲಿ ಚಲೋ ಅಭಿಯಾನದಲ್ಲಿ ಪಾಲ್ಗೊಂಡು ಈ ತಿಂಗಳ 14ರಂದು ಮತ್ತೆ ದೆಹಲಿಯಿಂದ ಹೊರಟು ಬೀದರಿಗೆ ಪುನಃ ವಾಪಸ್ಸಾಗಲಿದ್ದೇವೆ. ಕೇಂದ್ರ ಸರ್ಕಾರಕ್ಕೆ ಅಭಿಯಾನದ ಮಹತ್ವವನ್ನ ತಿಳಿಸುವುದು ಹಾಗೂ ಬಿ.ಟಿ ಕಾಯ್ದೆ 1949 ರದ್ದುಗೊಳಿಸಿ, ಬೌದ್ಧರಿಗೆ ಬುದ್ಧ ಗಯಾದ ಸಂಪೂರ್ಣ ಆಡಳಿತವನ್ನು ಬಾದ್ದರಿಗೆ ವಹಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಈ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಭಂತೆ ಕರುಣಾನಂದರು, ಯಶಪಾಲ ಬೋರೆ ಹಾಗೂ ಸುರೇಶ ಜೋಜನಾಕರ್, ರಾಜಕುಮಾರ್ ಮೂಲಭಾರತಿ ಮಾತನಾಡಿದರು. ಜಗನ್ನಾಥ ಕಾಂಬಳೆ, ಗಂಗಮ್ಮ ಫುಲೆ, ವಿಜಯದಶಮಿ ಗೂನಳ್ಳಿ, ನರಸಿಂಗ ಮೀರಾಗಂಜ್, ಶಶಿಧರ ಭಾಸನ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಮೊದಲನೇ ಪುಟದಿಂದ

# ರಾಯಭಾರ ಕಚೇರಿಗೆ ಬಾಂಬ್ ಬೆದರಿಕೆ

ಸುದ್ದಿ ತಿಳಿದ ಆರ್‌ಟಿ ನಗರ ಪೊಲೀಸರು ರಾಯಭಾರ ಕಚೇರಿಗೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಇ-ಮೇಲ್ ಕಳುಹಿಸಿರುವ ದುಷ್ಕರ್ಮಿಗಳಿಗಾಗಿ ಶೋಧ ನಡೆಸುತ್ತಿದ್ದಾರೆ.

ಬಾಂಬ್ ಬೆದರಿಕೆ ಸಂದೇಶಗಳು ಬಂದಿರುವ ಹಿನ್ನೆಲೆಯಲ್ಲಿ ಹಲಸೂರಿನಲ್ಲಿರುವ ಇಟಾಲಿಯನ್ ಕಾನ್ಸುಲೇಟ್ ಕಚೇರಿ ಹಾಗೂ ಕಬ್ಬನ್ ರಸ್ತೆಯಲ್ಲಿರುವ ಜಪಾನ್ ಕಾನ್ಸುಲೇಟ್ ಕಚೇರಿ ಸೇರಿದಂತೆ ನಗರದಲ್ಲಿರುವ ಎಲ್ಲಾ ರಾಯಭಾರ ಕಚೇರಿಗಳಿಗೆ ಬಿಗಿ ಬಂದೋಬಸ್ತ್ ಭದ್ರತೆಯನ್ನು ಒದಗಿಸಲಾಗಿದೆ.

# ನಮ್ಮ ತಂದೆಯೇ 5 ವರ್ಷ ಸಿಎಂ

ನಮ್ಮಲ್ಲಿ ಈಗ ಯಾವ ಗೊಂದಲಗಳು ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನಾನು ಯಾವತ್ತು ಜಾರ್ಜ್ ಅವರ ಬಗ್ಗೆ ಅವರ ಇಲಾಖೆಯ ಬಗ್ಗೆ ಯಾವ ಚರ್ಚೆಯನ್ನು ಮಾಡಿಲ್ಲ. ಜಾರ್ಜ್ ಅವರೇ ಈ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದಾರೆ. ಸುಖಾಸುಮ್ಮನೆ ಬಿಜೆಪಿಯವರು ನನ್ನ ಹೆಸರನ್ನು ಎಳೆದು ತಂದಿದ್ದಾರೆ,' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನನ್ನ ತಂದೆಯವರನ್ನು ಟಾರ್ಗೆಟ್ ಮಾಡಲು ಬಿಜೆಪಿಗೆ ಆಗೋದಿಲ್ಲ.ಈ ಕಾರಣದಿಂದ ಎಲ್ಲಾ ವಿಚಾರದಲ್ಲೂ ನನ್ನನ್ನು ಟಾರ್ಗೆಟ್ ಮಾಡುತ್ತಾರೆ. ಜಾರ್ಜ್ ಅವರ ವಿಚಾರದಲ್ಲೂ ಆಗಿರುವುದು ಅದೇ ಎಂದು ವಾದಿಸಿದರು.

**ಎಲ್ಲಾ ಚುನಾವಣೆಗಳಲ್ಲೂ ಇವಿಎಂ ರದ್ದಾಗಬೇಕು:** ಎಲ್ಲಾ ಚುನಾವಣೆಗಳಲ್ಲೂ ಇವಿಎಂ ರದ್ದಾಗಬೇಕು, ಬ್ಯಾಲೆಟ್ ಪೇಪರ್ ಬಳಕೆ ಮತ್ತೆ ಬರಬೇಕು. ಗ್ರಾಮ ಪಂಚಾಯ್ತಿ ಚುನಾವಣೆಗಳಲ್ಲಿ ಬ್ಯಾಲೆಟ್ ಪೇಪರ್ ಬಳಸಲು ನಿರ್ಧರಿಸಲಾಗಿದೆ. ಇದೇ ರೀತಿ ಎಲ್ಲಾ ವಿಧಾನಸಭೆ ಚುನಾವಣೆಗಳಲ್ಲೂ ಬ್ಯಾಲೆಟ್ ಪೇಪರ್ ಬಳಕೆಯಾಗಬೇಕು ಎಂದು ಹೇಳಿದರು.

ಇವಿಎಂ ಮತಯಂತ್ರದಲ್ಲಿ ಸಾಕಷ್ಟು ದೋಷಗಳಿವೆ. ಇವಿಎಂ ಅನ್ನು ಹ್ಯಾಕ್ ಮಾಡಬಹುದು. ದೋಷ ಪೂರಿತ ವ್ಯವಸ್ಥೆ ಇದ್ದ ಮೇಲೆ ಅದನ್ನು ಯಾಕೆ ಇಟ್ಟುಕೊಳ್ಳಬೇಕು ? , ಮೊದಲಿನ ರೀತಿ ಈಗ ಬ್ಯಾಲೆಟ್ ಬಾಕ್ಸ್ ಗಳನ್ನು ಕಳ್ಳತನ ಮಾಡಲು ಆಗೋದಿಲ್ಲ ಎಂದು ವ್ಯಾಖ್ಯಾನ ಮಾಡಿದರು.

ರಾಜ್ಯದಲ್ಲಿ ನಮ್ಮ ವ್ಯವಸ್ಥೆ ಬಹಳ ಬಿಗಿಯಾಗಿದೆ. ಹೀಗಾಗಿ ತಾಂತ್ರಿಕ ಕಳ್ಳತನ ಮಾಡಲು ಇವಿಎಂನಲ್ಲಿ ಸಾಧ್ಯವಿದೆ. ಈ ಎಲ್ಲಾ ಕಾರಣದಿಂದ ಇವಿಎಂ ರದ್ದಾಗಬೇಕು ಎಂದು ಸಮರ್ಥಿಸಿಕೊಂಡರು.

# ಯತೀಂದ್ರನೇ ನಮ್ಮ ಹೈಕಮಾಂಡ್

ಯಾವುದೇ ಊಹಾಪೋಹ ಇಲ್ಲ ಎಂಬ ಯತೀಂದ್ರ ಹೇಳಿಕೆ ಬಗ್ಗೆ ಕೇಳಿದಾಗ, 'ಅವರೇ ನಮ್ಮ ಹೈ ಕಮಾಂಡ್. ಅವರು ಏನು ಹೇಳುತ್ತಾರೋ ಅದನ್ನು ಗೌರವದಿಂದ ಸ್ವೀಕಾರ ಮಾಡುತ್ತೇನೆ. ಅವರೇ ಹೈಕಮಾಂಡ್ ಎಂಬಂತೆ ಹೇಳಿಕೆ ನೀಡಿರುವಾಗ ಅವರನ್ನೇ ಹೈಕಮಾಂಡ್ ಎಂದು ಸ್ವೀಕಾರ ಮಾಡೋಣ' ಎಂದು ತಿಳಿಸಿದರು.

ಶಾಸಕ ಬಸವರಾಜು ಅವರು ಅಧಿಕಾರ ಒಪ್ಪಂದದ ಬಗ್ಗೆ ಸ್ಪಷ್ಟನೆ ಬೇಕು ಎಂಬ ಹೇಳಿಕೆ ಬಗ್ಗೆ ಕೇಳಿದಾಗ,

'ಬಸವರಾಜು, ಯತೀಂದ್ರ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ, ಏನೇ ಪ್ರತಿಕ್ರಿಯೆ ನೀಡುವುದಿದ್ದರೂ ದೆಹಲಿಯವರು ಪ್ರತಿಕ್ರಿಯೆ ನೀಡಬೇಕು,' ಎಂದು ತಿಳಿಸಿದರು.

# ಬಳಗಾನೂರು : ಖೋಖೋ ಕ್ರೀಡಾಪಟು ಮೌನೇಶ ನಾಯಕಗೆ ಸನ್ಮಾನ



● **ಸುದ್ದಿಮೂಲ ವಾರ್ತೆ** ಬಳಗಾನೂರು, ಫೆ.06:
ಇತ್ತೀಚೆಗೆ ತುಮಕೂರು ನಲ್ಲಿ ನಡೆದ ರಾಷ್ಟ್ರಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಸರಣಿ ಆಟಗಾರ ಪ್ರಶಸ್ತಿ ಪಡೆದ ಖೋಖೋ ಕ್ರೀಡಾಪಟು ಪಟ್ಟಣದ ಮೌನೇಶನಾಯಕ ಅವರನ್ನು ಶಿಕ್ಷಕರಾದ ಎಂ.ಡಿ.ಆಲಂಸಾಬ್, ಶಿಕ್ಷಕಿ ಇರ್ಫಾನ್‌ಬೇಗಂ ಹಾಗೂ ಪಪಂ ಉಪಾಧ್ಯಕ್ಷ ಮಂಜುನಾಥಸ್ವಾಮಿ, ಸದಸ್ಯರಾದ ಹನುಮೇಶ ಹೂಗಾರ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಎಂಡಿ ಆಲಂಸಾಬ್, ದೈಹಿಕ ಶಿಕ್ಷಣ ಶಿಕ್ಷಕ ಬಸವರಾಜ್‌ಯಾದಗಿರಿ, ಪತ್ರಕರ್ತ ಹನುಮೇಶ ಕಮ್ಮಾರ ಮಾತನಾಡಿ, ಗ್ರಾಮೀಣ ಪ್ರತಿಭೆಗೆ ಎಲ್ಲರ ಸಹಕಾರ ನೀಡಿ ಇನ್ನಷ್ಟು ಸಾಧನೆ ಮಾಡಲು ಸಹಕರಿಸೋಣ ಎಂದರು.

ಕಾರ್ಯಕ್ರಮದಲ್ಲಿ ಮೌನೇಶನಾಯಕ, ಕಾಳಪ್ಪನಾಯಕ, ಶಿವಶರಣದೋಡ್ಲಾ, ದೇವಪ್ಪ ಉಪ್ಪಾರ, ಅಮರೇಶಗಚ್ಚಿನಮನಿ, ಕುಮಾರನಾಯಕ, ಕಾರ್ತೀಕ, ಹೈಮದ್ ಹಾಗೂ ಗೆಳೆಯರ ಬಳಗ ಸನ್ಮಾನಿಸಿ ಕ್ರೀಡಾಪಟು ಅಂತಾರಾಷ್ಟ್ರೀಯ ಮಟ್ಟದವರೆಗೂ ಬೆಳೆಯಲಿ ಎಂದು ಶುಭಹಾರೈಸಿದರು.

## ಮಸ್ಕಿ –ನಕಲಿ ಜಾತಿ ಪ್ರಮಾಣ ಪತ್ರ ತಡೆಗೆ ವಿಫಲ

# ವಾಲ್ಮೀಕಿ ನಾಯಕ ಸಮಾಜದಿಂದ ಶಾಸಕರ ಕಚೇರಿ ಮುಂದೆ ಪ್ರತಿಭಟನೆ

● **ಸುದ್ದಿಮೂಲ ವಾರ್ತೆ** ಮಸ್ಕಿ, ಫೆ.06:
ಪರಿಶಿಷ್ಟ ಪಂಗಡದ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ವಿತರಣೆ ನಡೆಯುತ್ತಿದ್ದು, ಇದನ್ನು ತಡೆಗಟ್ಟುವಲ್ಲಿ ಸಮಾಜದ ಶಾಸಕರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಆರೋಪಿಸಿ ಉತ್ತರ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಮಾಜ ವತಿಯಿಂದ ಮಸ್ಕಿ ಪಟ್ಟಣದ ಶುಕ್ರವಾರ ಶಾಸಕ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಮೌನೇಶ ನಾಯಕ, ರಾಘವೇಂದ್ರ, ನಾಯಕ ಜಾಲವಡಿಗಿ ಮಾತನಾಡಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ನಕಲಿ ಜಾತಿ ಪ್ರಮಾಣ ಪತ್ರಗಳ ಕುರಿತು ಸ್ವತಂತ್ರ ತನಿಖೆ ನಡೆಸಲು ಮತ್ತು ಸ್ವಯಂಪ್ರೇರಿತ (ಸೋಮೋಟೋ) ಪ್ರಕರಣ ದಾಖಲಿಸಿಕೊಳ್ಳುವ ಅಧಿಕಾರ ನೀಡಬೇಕು ಎಂದು ಶಾಸಕರು ಅಕ್ರಮ ತಡೆದು ಎಫ್ ಐಆರ್ ದಾಖಲಿಸಲು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮರೆಪ್ಪ ದೊರೆ, ಲಿಂಗಣ್ಣ, ಯಲ್ಲಪ್ಪ, ಮಲ್ಲಿಕಾರ್ಜುನ, ರಾಘವೇಂದ್ರ, ಶಿವ್ ಕುಮಾರ, ತಿರುಪತಿ, ಪಂಪಾಪತಿ, ದೊಡ್ಡ ಜಕ್ಕಪ್ಪ, ಗಂಗಾಧರ,ದೊಡ್ಡನಗೌಡ ಹಾಗೂ ಮಸ್ಕಿ ತಾಲೂಕಿನ ವಾಲ್ಮೀಕಿ,

ನಾಯಕ ಸೇರಿದಂತೆ ಸಮಾಜದ ಅನೇಕ ಮುಖಂಡರು ಹಾಗೂ ಸದಸ್ಯರು ಭಾಗವಹಿಸಿದ್ದರು.




# 'ಗ್ರಾಮೀಣ ಶ್ರಮಿಕರ ಸಬಲೀಕರಣವೇ 'ವಿಬಿ-ಜಿ ರಾಮ್ ಜಿ'ಯ ಉದ್ದೇಶ'

● **ಸುದ್ದಿಮೂಲ ವಾರ್ತೆ** ಹರಪನಹಳ್ಳಿ, ಫೆ.06:
'ವಿಬಿ-ಜಿ ರಾಮ್ ಜಿ' ಕಾಯ್ದೆ ಭಾರತದ ಹಳ್ಳಿಗಳ ಹಾಗೂ ಗ್ರಾಮೀಣ ಭಾಗದ ಕೂಲಿಕಾರ್ಮಿಕರ ಸಮೃದ್ಧಿಯ ಹೊಸ ಅಧ್ಯಾಯವನ್ನೇ ಬರೆಯಲಿದೆ ಎಂದು ಮಾಜಿ ಶಾಸಕ ಕರುಣಾಕರ ರೆಡ್ಡಿ ಹೇಳಿದರು.

ತಾಲೂಕಿನ ಬೆಣ್ಣಿಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಲೋಲೇಶ್ವರ ಗ್ರಾಮದಲ್ಲಿ ಗ್ರಾಮೀಣ ಭಾಗದ ಕೂಲಿ ಕಾರ್ಮಿಕರ ಜೊತೆ ಸಂವಾದ ನಡೆಸಿ ಯೋಜನೆ ಕುರಿತಂತೆ ಮಾಹಿತಿ ನೀಡಲಾಯಿತು.

ಭ್ರಷ್ಟಾಚಾರ ಮುಕ್ತ ಹಾಗೂ ನೇರ ಸೌಲಭ್ಯ ನೀಡುವ ಈ ಅಭಿಯಾನದಲ್ಲಿ ನಾವೆಲ್ಲರೂ ಕೈಜೋಡಿಸೋಣ. ವಿಕಸಿತ ಭಾರತದ ಕನಸನ್ನು



ಹಳ್ಳಿ ಹಳ್ಳಿಗಳಲ್ಲಿ ನನಸಾಗಿಸಲು ನಾವು ಕಟಿಬದ್ಧರಾಗಿದ್ದೇವೆ. ವಿ ಬಿ ರಾಮ್ ಜಿ ಯಾ ಮನ್‌ರೇಗಾದ ಹೊಸ ರೂಪದ ಆಯಾಮವಾಗಿದ್ದು ಕಾಯಿದೆಯ ಬದಲಾವಣೆಯಲ್ಲಿ ಯಾವುದೇ ದುರುದ್ದೇಶವಿಲ್ಲ ಎಂದರು.

ಈ ಸಂದರ್ಭದಲ್ಲಿ ತಾಲೂಕು ಮಂಡಲ ಅಧ್ಯಕ್ಷ ಕೆ ಶೇಖರಪ್ಪ ಯಡಿಹಳ್ಳಿ ಬಿ ಲೋಕೇಶ್. ಬಾಗಳಿ ಕೊಟ್ರೇಶಪ್ಪ ಮಹೇಶ್ ಪೂಜಾರ್, ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು, ಗ್ರಾಮಸ್ತರು ಉಪಸ್ಥಿತರಿದ್ದರು.


**CITAION**
**In the Court of the Hob'ble Addl. Civil Judge & J.M.F.C**
**At : Shorapur.**
**Crl.Misc.Case. No. 81 of 2026.**

1. Sabawwa W/o late Shivappa Age : 60 Years, Occ. House hold 2. Ayyappa S/o Late Shivappa Age : 42 years, Occ. Agri, 3. Chidananda S/o Late Shivappa Age : 40 years, Occ. Agri, 4. Sangamma W/o Ningappa Age: 38 Years, Occ. House hold 5. Devamma W/o Mallappa Age: 36 Years, Occ. House hold 6. Subhaschandra S/o Late Shivappa Age: 34 Years, Occ. Agri All R/o Kuriyar Doddi Kakkera. Tq. Shorapur. Dist. Yadgiri. **..... Petitioners.**

**-V/s-**

1. The Chief officer T.M.C. Kakkera,. Tq : Shorapur. Dist : Yadgiri.
2. All Concerned. **..... Respondents.**

**Claim :** Petition U/s 13(3) of Registration of birth & death act.1969

Whereas the above named petitioners have filed and application U/s 13(3) of registration of birth & death act.1969 against the Chief officer T.M.C. Kakkera. Tq Shorapur. Dist. Yadgiri and all concerned person for issue of death certificate of late Shivappa S/o Narasappa stating that the petitioners are the only leagl heirs and successors of late Shivappa S/o Narasappa who was died on 11-01-2004 at Kakkera.Tq. Shorapur. Dist. Yadgiri. Hence the petitioners have filed this petition for issue of death certificate.

Therefore you are hereby directed to all concerned in the above case and to appear before this court on 10-03-2026 in person or through pleader duly instructed to answer the petition, failing which necessary orders will be passed in your absece accordingly to law.

Given under my hand seal of this court on this 5th day of -Feb-2026 at Shorapur.

**Sd/- G.Thammanna**
**Advocate for**
**Petitioners**

**// By Order of the Court //**
**Sd/- C.M.O.**
**Prl. Civil Judge & JMFC**
**Court Shorapur. Dist. Yadgiri.**



**CITATION**
**In the Court of the Hon'ble Prl. Civil Judge & J.M.F.C**
**At : Shorapur**
**Crl.Misc.No. 88 of 2026**

1. Paramawwa D/o Bhimanna Age : 26 Years, Occ. House hold R/o Peth Ammapur Village. Tq. Shorapur. Dist. Yadgiri. **..... Petitioner.**

**-V/s-**

1. The Tahasildar Shorapur. Tq : Shorapur. Dist : Yadgiri.
2. All Concerned. **..... Respondents.**

**Claim :** Petition U/s 13(3) of Registration of birth & death act.1969.

Whereas the above named petitioners has filed an application U/s 13(3) of registration of birth & death act.1969 against the Tahasildar Shorapur and all concerned person for issue of death certificate of late Neelamma W/o Bhimanna stating that the petitioner is the only legal heirs and successors of late Neelamma W/o Bhimanna she was died on 03-08-2021 at peth Ammapur Village. Tq. Shorapur. Dist. Yadgiri. Hence the petitioner has filed this petition for issue of death certificate.

Therefore you are hereby directed to all concerned in the above case and to appear before this court on 11-03 -2026 in person or through pleader duly instruct to answer the petition, failing which necessary orders will be passed in your absence according to law.

Given under my hand seal of this court on this 5th day of Feb-2026 at Shorapur.

**Sd/- G.Thammanna**
**Advocate for**
**Petitioners**

**// By Order of the Court //**
**Sd/- C.M.O.**
**Prl. Civil Judge & JMFC**
**Court Shorapur. Dist. Yadgiri.**



**SHILPA MEDICARE LIMITED.**
Innovating for affordable healthcare
Registered office # 12-6-214/A-1, Hyderabad Road, Raichur-584135
Website - www.vbshilpa.com, Email - info@vbshilpa.com. ,Telephone -+91-8532-238704
CIN No. - L85110KA1987PLC008739

**Extract of the Standalone and Consolidated unaudited Financial Results for the Quarter Ended 31.12.2025**

(In Lakhs)

| Sl. No. | Particulars | STANDALONE | | | | | | CONSOLIDATED | | | | | |
|---|---|---|---|---|---|---|---|---|---|---|---|---|---|
| | | Quarter ended 31-12-2025 (UNAUDITED) | Quarter ended 30.09.2025 (UNAUDITED) | Quarter ended 31.12.2024 (UNAUDITED) | Nine months ended 31.12.2025 (UNAUDITED) | Nine months ended 31.12.2024 (UNAUDITED) | Previous Year ended 31-03-2025 (AUDITED) | Quarter ended 31-12-2025 (UNAUDITED) | Quarter ended 30.09.2025 (UNAUDITED) | Quarter ended 31.12.2024 (UNAUDITED) | Nine months ended 31.12.2025 (UNAUDITED) | Nine Months ended 31.12.2024 (UNAUDITED) | Previous Year ended 31-03-2025 (AUDITED) |
| 1 | Total Income from Operations | 16570.47 | 13,493.28 | 12,538.66 | 39,307.06 | 35,118.84 | 47,734.20 | 40972.67 | 36,996.88 | 31,930.12 | 110,115.29 | 95,560.91 | 128,641.40 |
| 2 | Net Profit before tax, non controlling interest & share in profit /(loss) of joint venture / associates (before exceptional items) | 2598.8 | 4,049.01 | 2,534.33 | 8,644.33 | 11,664.79 | 15,106.93 | 7371.45 | 6,442.98 | 4,161.04 | 18,772.43 | 10,705.97 | 15,041.43 |
| 3 | Net Profit before tax , non controlling interest & share in profit /(loss)of joint venture/associates (after exceptional items) | 2378.54 | 3,892.37 | 2,485.70 | 7,749.40 | 11,523.02 | 10,533.12 | 6085.33 | 6,442.98 | 4,161.04 | 17,486.31 | 10,705.97 | 12,233.29 |
| 4 | Net Profit after tax , non controlling interest & share in profit /(loss)of joint venture / associates (after exceptional items) | 1593.46 | 3,082.83 | 1,564.65 | 6,746.01 | 7,351.96 | 6,789.63 | 4458.22 | 4,406.68 | 3,178.41 | 13,553.46 | 6,378.39 | 7,829.30 |
| 5 | **Total Income (including other comprehensive income /(loss))** | **1584.05** | **3,082.83** | **1,564.65** | **6,736.60** | **7,351.96** | **6,595.32** | **4875.16** | **4,403.12** | **3,181.26** | **13,963.28** | **6,386.94** | **7,599.22** |
| 6 | Equity Share Capital | 1955.82 | 977.91 | 977.91 | 1955.82 | 977.91 | 977.91 | 1955.82 | 977.91 | 977.91 | 1,955.82 | 977.91 | 977.91 |
| 7 | Reserves (excluding Revaluation Reserve) as shown in the Audited Balance Sheet i.e Other Equity | - | - | - | - | - | 263,715.68 | - | - | - | | - | 235,291.68 |
| 8 | Earnings Per Share (of Rs. 1/- each)(for continuing operations) -(in Rs) | (Not annualised) | (Not annualised) | (Not annualised) | (Not annualised) | (Not annualised) | (Annualised) | (Not annualised) | (Not annualised) | (Not annualised) | (Not annualised) | (Not annualised) | (Annualised) |
| | 1) Basic: | 0.84 | 1.58 | 0.80 | 5.26 | 3.78 | 3.48 | 2.36 | 2.25 | 1.63 | 10.56 | 3.28 | 4.02 |
| | 2) Diluted: | 0.84 | 1.58 | 0.80 | 5.26 | 3.78 | 3.48 | 2.36 | 2.25 | 1.63 | 10.56 | 3.28 | 4.02 |

**Notes:**

1 The above is an extract of the detailed format of unaudited financial results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the unaudited financial results are available on the Investor section of our website www.vbshilpa.com and under corporate section of BSE Limited and National Stock Exchange of India Limited.

2 The above results have been reviewed by the Audit Committee and approved by the Board of Director at its meeting held on 6th February, 2026

**For and on behalf of the Board of Directors**
Sd/-
Omprakash Inani
**Chairman**

Date: 06/02/2026
Place Raichur



**ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ - 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ
ದೂ.: 08537-276339, ಇ-ಮೇಲ್: material276339@gmail.com
ವೆಬ್‌ಸೈಟ್: www.huttigold.karnataka.gov.in

T.NO.34/25-26 No.HGML/2025-26/
PREQUAL_TENDER_NUMBER_2 ದಿನಾಂಕ: 07.02.2026

**ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ (EOI) ಟೆಂಡರ್ ಪ್ರಕಟಣೆ**

HGMLಗೆ ರೇಡಿಯಾಲಜಿ ಮತ್ತು ಇಮೇಜಿಂಗ್ ಸೇವೆಗಳನ್ನು ಒದಗಿಸಲು ಅರ್ಹ, ಹೆಸರಾಂತ ಮತ್ತು ಅನುಭವಿ ರೋಗನಿರ್ಣಯ ಕೇಂದ್ರಗಳು/ಆಸ್ಪತ್ರೆಗಳು/ ರೇಡಿಯಾಲಜಿ ಸೇವಾ ಪೂರೈಕೆದಾರರಿಂದ ಆಸಕ್ತಿಯ ಅಭಿವ್ಯಕ್ತಿ (EOI), ಕಟ್ಟುನಿಟ್ಟಾಗಿ CGHS-2025 ದರಗಳಲ್ಲಿ.

ಈ ಕಾರ್ಯಕ್ಕೆ ಆಸಕ್ತ ಸಲಹೆಗಾರರು/ಸಮಾಲೋಚಕ ಸಂಸ್ಥೆ/ವೈಯಕ್ತಿಕ ಸಲಹೆಗಾರರು ಸಾಮಾನ್ಯ ಷರತ್ತುಗಳು, ಅರ್ಹತಾ ಮಾನದಂಡಗಳು ಇತ್ಯಾದಿ ಅಗತ್ಯ ವಿವರಗಳಿಗಾಗಿ **https://www.kppp.karnataka.gov.in** ಲಿಂಕ್‌ಗೆ ಭೇಟಿ ನೀಡಬೇಕು. EOIಗಾಗಿ ಆಸಕ್ತ ಏಜೆನ್ಸಿಗಳು KPP Portal GOK ನೋಂದಾಯಿಸಿಕೊಳ್ಳಬೇಕು.

**ಟೆಂಡರ್ ವೇಳಾಪಟ್ಟಿ:** ಪ್ರೀ-ಬಿಡ್ ಸಭೆ (Zoom): **19.02.2026** ಬೆಳಿಗ್ಗೆ **11.00 ಗಂಟೆಗೆ.** ಬಿಡ್ ಸ್ವೀಕರಿಸುವ ಕಡೆಯ ದಿನಾಂಕ: **09.03.2026** ಸಂಜೆ **4.00 ಗಂಟೆಗೆ.** ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **11.03.2026** ಬೆಳಿಗ್ಗೆ **10.00 ಗಂಟೆಗೆ.**

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

**ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು**